**ಓ.ಎಸ್. ನಂಃ 566/2022**

**ಪಿ. ಡಬ್ಲ್ಯೂಃ 1**

**ದಿನಾಂಕ 05.03.2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿಯ ಪರ ಃ ಶ್ರೀಮತಿ ಆರ್.ಹೆಚ್.ಆರ್. ವಕೀಲರಿಂದಃ</u>**

1. ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿದ್ದು, ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ದಾವಾ ಆಸ್ತಿಯು ಸರ್ವೇ ನಂಬರ್ 115 ರಲ್ಲಿದೆ. ದಾವಾ ಆಸ್ತಿಗೆ ಪ್ರತಿವಾದಿಯರು ಬಂದು ತೊಂದರೆ ಕೊಟ್ಟ ಕಾರಣ ನಾನು ಈ ದಾವೆಯನ್ನು ಹೂಡಿರುತ್ತೇನೆ. ದಾವಾ ಆಸ್ತಿಯು ಕೋಡಿಯಾಳ ಗ್ರಾಮದಲ್ಲಿದೆ. ಸರ್ವೇ ನಂಬರ್ 115 ರ ಯಾವ ದಿಕ್ಕಿನಲ್ಲಿ ದಾವಾ ನಿವೇಶನ ಇದೆ ಎಂದು ನನಗೆ ಗೊತ್ತಿಲ್ಲ.

2. ಪ್ರತಿವಾದಿ ಸಂಖ್ಯೆ 1 ಮತ್ತು 8 ರವರು ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿ ಹೇಳಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ದಾವಾ ಆಸ್ತಿಯ ಸಂಬಂಧ ಎ.ಡಿ.ಎಲ್.ಆರ್ ರವರ ಕಚೇರಿ ಮತ್ತು ಜಿಲ್ಲಾಧಿಕಾರಿಯವರ ನ್ಯಾಯಾಲಯದಲ್ಲಿ ಪ್ರಕರಣ ನಡೆದಿತ್ತು ಎಂದರೆ ಸರಿ. ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳುವಂತೆ ಆದೇಶಿಸಿ ಸದರಿ ಪ್ರಕರಣಗಳು ಮುಕ್ತಾಯಗೊಂಡಿರುತ್ತದೆ. ದಾವಾ ಆಸ್ತಿ ನನಗೆ ಮಂಜೂರಾದ ಬಗ್ಗೆ ನಿಪಿ.1 ರ ದಾಖಲೆಯನ್ನು ಹೊರತುಪಡಿಸಿ ನನ್ನ ಬಳಿ ಬೇರೆ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿ.

3. ದಾವಾ ಆಸ್ತಿಯನ್ನು ನನಗೆ ಮಂಜೂರು ಮಾಡಿದ ನಂತರ ಕಂದಾಯ ಅಧಿಕಾರಿಗಳು ದಾವಾ ಆಸ್ತಿಯನ್ನು ನನಗೆ ತೋರಿಸಿ ಗಡಿ ಗುರುತು ಮಾಡಿಸಿಕೊಟ್ಟಿರುತ್ತಾರೆ. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಕಂದಾಯ ಅಧಿಕಾರಿಗಳು ದಾವಾ ಆಸ್ತಿಯನ್ನು ನನಗೆ ತೋರಿಸಿ ಗಡಿ ಗುರುತು ಮಾಡಿಸಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸಂಬಂಧ ನಾನು ಯಾವುದೇ ಕಂದಾಯ ಪಾವತಿಸಿರುವುದಿಲ್ಲ ಎಂದರೆ ಸರಿಯಲ್ಲ.

4. ಪ್ರತಿವಾದಿ ಸಂಖ್ಯೆ 1 ಮತ್ತು 8 ರವರು ಕೋಡಿಯಾಳದಲ್ಲಿ ವಾಸವಿದ್ದಾರೆ ಎಂದರೆ ಸರಿ. ಕೋಡಿಯಾಳ ಗ್ರಾಮದ ಸರ್ವೇ ನಂಬರ್ 150 ರಲ್ಲಿ 8 ನೇ ಪ್ರತಿವಾದಿಗೆ ಸೇರಿದ 1 ಎಕರೆ 20 ಗುಂಟೆ ಜಮೀನು ಇದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. 8 ನೇ ಪ್ರತಿವಾದಿಯೇ ಸದರಿ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನಿಪಿ.1 ರ ಆಧಾರದ ಮೇಲೆ ದಾವಾ ಆಸ್ತಿ ನನ್ನ ಹೆಸರಿಗೆ ಖಾತೆ ವರ್ಗಾವಣೆ ಆಗಿದ್ದು ಅದರ ಸಂಬಂಧ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

5. ದಾವಾ ಆಸ್ತಿಯು ಸರ್ವೇ ನಂಬರ್ 115 ರಲ್ಲಿ ಅಸ್ತಿತ್ವದಲ್ಲಿದ್ದರು ಸಹ 8 ನೇ ಪ್ರತಿವಾದಿಯ ಸರ್ವೇ ನಂಬರ್ 150 ರ ಜಮೀನಿನಲ್ಲಿ ದಾವಾ ಆಸ್ತಿ ಇದೆ ಎಂದು ನಾವು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೋಡಿಯಾಳ ಗ್ರಾಮದ ಸರ್ವೇ ನಂಬರ್ 150 ರ 1 ಎಕರೆ 20 ಗುಂಟೆ ಜಮೀನು 8 ನೇ ಪ್ರತಿವಾದಿಗೆ ತಮ್ಮ ಗಂಡನಿಂದ ದಾನದ ರೂಪದಲ್ಲಿ ಬಂದಿದ್ದು, ಇಂದಿಗೂ ಸಹ 8 ನೇ ಪ್ರತಿವಾದಿಯೇ ಸದರಿ ಆಸ್ತಿಯ ಮಾಲೀಕರು ಮತ್ತು ಸ್ವಾಧೀನದಾರರಾಗಿರುತ್ತಾರೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿ ಮಂಜೂರು ಆಗದಿದ್ದರು ಸಹ ನಾನು 4 ನೇ ಪ್ರತಿವಾದಿಯೊಂದಿಗೆ ಶಾಮಿಲಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ 1 ಮತ್ತು 8 ನೇ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**